# ಗ್ರೇಸ್ ಮತ್ತು ಲಿಂಕನ್‌ರ ಗಡ್ಡ

ಗ್ರೇಸ್ ಬೆಡೆಲ್ ರಾತ್ರಿ ಚಿಮಣಿ ದೀಪದ ಮುಂದೆ ಕುಳಿತು ಓದುತ್ತಿದ್ದಳು. ಅವಳಿಗೆ ಹನ್ನೊಂದು ವರ್ಷ. ಅವಳ ತಂದೆ ಅವಳ ಬಳಿ ಬಂದು ಒಂದು ಫೋಟೋವನ್ನು ಅವಳ ಕೈಗಿತ್ತ. 'ಇದು ನಿನಗಾಗಿ' ಎಂದ. ಹುಡುಗಿ ಚಿತ್ರವನ್ನು ನೋಡಿದಳು. ಅದು ಅಬ್ರಹಾಂ ಲಿಂಕನ್‌ರ ಚಿತ್ರ. ಲಿಂಕನ್ ಆಗ ಅಮೆರಿಕದ ಅಧ್ಯಕ್ಷಸ್ಥಾನಕ್ಕೆ ನಡೆಯುವ ಚುನಾವಣೆಯಲ್ಲಿ ಅಭ್ಯರ್ಥಿಯಾಗಿದ್ದರು. ತಂದೆ 'ಗುಡ್ ನೈಟ್' ಹೇಳಿ ಹೋದ ಮೇಲೆ, ಗ್ರೇಸ್ ಗಾಳಿಗೆ ಓಲಾಡುವ ದೀಪದ ಬೆಳಕಿನಲ್ಲಿ ಲಿಂಕನ್‌ರ ಚಿತ್ರವನ್ನು ನೋಡಿದಳು. ದೀಪದ ಜ್ವಾಲೆ ಕುಣಿದಂತೆಲ್ಲ ಚಿತ್ರ ಒಂದೊಂದು ರೀತಿ ಕಾಣುತ್ತಿತ್ತು. ಲಿಂಕನ್‌ರ ಗುಳಿಬಿದ್ದ ಕೆನ್ನೆ ಅವಳಿಗೆ ಚಂದ ಕಾಣಿಸಲಿಲ್ಲ. ದೀಪದ ನೆರಳು ಬೆಳಕಿನಾಟದಲ್ಲಿ ಲಿಂಕನ್ ಚಿತ್ರದ ಒಂದು ಭಾಗ ಕತ್ತಲಾದಾಗ, ಅವರಿಗೆ ಗಡ್ಡವಿದ್ದಂತೆ ಗ್ರೇಸ್‌ಗೆ ಅನ್ನಿಸಿತು. 'ಲಿಂಕನ್‌ರಿಗೆ ಗಡ್ಡವಿದ್ದರೆ!' ಎಂದುಕೊಂಡ ಅವಳು, ಅವರು ಗಡ್ಡ ಬೆಳೆಸಿದರೆ ಚುನಾವಣೆಯ ಪ್ರಚಾರದಲ್ಲಿ ಒಳ್ಳೆಯ ಪ್ರಭಾವ ಬೀರಬಹುದೆಂದುಕೊಂಡಳು. ಈ ಸಲಹೆಯೊಂದಿಗೆ ಲಿಂಕನ್‌ಗೆ ಒಂದು ಪತ್ರ ಬರೆದಳು.



ಲಿಂಕನ್‌ರ ಆಫೀಸಿನವರು ಗ್ರೇಸ್ ಬರೆದ ಪತ್ರವನ್ನು ಕಸದ ಬುಟ್ಟಿಗೆ ಎಸೆಯುವುದರಲ್ಲಿದ್ದರು. ಆಗ ಅವರು ಆ ಪತ್ರದ ಬಗ್ಗೆ ಆಡುತ್ತಿದ್ದ ಮಾತುಗಳನ್ನು ಕೇಳಿಸಿಕೊಂಡ ಲಿಂಕನ್, ಅದನ್ನು ಅವರಿಂದ ತೆಗೆದುಕೊಂಡು ಓದಿದರು. ಅದರಲ್ಲಿದ್ದ ವಿಷಯದ ಬಗೆಗೆ ಚಿಂತಿಸಿದರು. ಗ್ರೇಸ್‌ಗೆ ತಮಾಷೆಯೆನಿಸುವಂತೆ ಒಂದು ಪತ್ರ ಬರೆದರು:

**ನನ್ನ ಪ್ರಿಯ ಪುಟಾಣಿ ತಾಯಿ,**

**ನಿನ್ನ ಮೆಚ್ಚಿಗೆಯ ಪತ್ರ ತಲುಪಿತು. ಆದರೆ ಇದುವರೆಗೂ ನಾನು ಗಡ್ಡ ಬೆಳೆಸದ ಕಾರಣ, ಈಗ ಬೆಳೆಸಿದರೆ ಜನ ಅದನ್ನು ಕ್ಷುಲ್ಲಕ ವ್ಯಾಮೋಹವೆಂದು ತಿಳಿಯಲಾರರೆ? ಪ್ರಾಮಾಣಿಕವಾಗಿ ನಿನ್ನ ಒಳಿತನ್ನು ಬಯಸುವ,**

**ಎ. ಲಿಂಕನ್**

ಕೊನೆಗೆ ಲಿಂಕನ್ ಅಧ್ಯಕ್ಷರಾದರು. ೧೮೬೧ ರ ಫೆಬ್ರವರಿ ೧೬ ರಂದು ಒಂದು ನಿಲ್ದಾಣದಲ್ಲಿಳಿದ ಲಿಂಕನ್‌ರನ್ನು ಕಿಕ್ಕಿರಿದ ಜನ ಸ್ವಾಗತಿಸಿದರು. ಅಲ್ಲಿ ಮಾತಾಡುತ್ತ ಲಿಂಕನ್, "ಈ ಊರಿನ ಜೊತೆ ನನಗೊಂದು ಸಣ್ಣ ಸಂಬಂಧವಿದೆ. ಗ್ರೇಸ್ ಬೆಡೆಲ್ ಎಂಬ ಚಿಕ್ಕ ಹುಡುಗಿಯೊಬ್ಬಳು ಮೊತ್ತಮೊದಲ ಬಾರಿ ನನ್ನ ಮುಖಭಾವ ಹೇಗೆ ಬದಲಾಗಬೇಕು ಎಂದು ಗುರುತಿಸಿದಳು. ಅವಳೀಗ ಇಲ್ಲಿದ್ದರೆ ನಾನು ಅವಳೊಂದಿಗೆ ಮಾತಾಡುತ್ತಿದ್ದೆ" ಎಂದರು.

ಗ್ರೇಸ್ ಬೆಡೆಲ್ ಆಗ ಅಲ್ಲಿದ್ದಳು. ಅವಳ ತಂದೆ ಅವಳನ್ನು ಜನರ ಗುಂಪಿನ ನಡುವಿನಿಂದ ಲಿಂಕನ್ ಬಳಿಗೆ ಕರೆತಂದ. ಜನ ಉಸಿರು ಬಿಗಿಹಿಡಿದು ನೋಡುತ್ತಿದ್ದರು. ಲಿಂಕನ್ ಗ್ರೇಸ್‌ಳತ್ತ ಬಾಗಿ, ಅವಳ ಎರಡೂ ಕೆನ್ನೆಗಳನ್ನು ಚುಂಬಿಸಿ, "ನಾನು ಗಡ್ಡ ಬೆಳೆಸಿದರೆ ಚಂದ ಎಂದು ನೀನು ಬರೆದೆ. ನೋಡು, ನಿನಗಾಗಿ ನಾನು ಗಡ್ಡ ಬೆಳೆಸಿದ್ದೇನೆ – ನನ್ನ ಚಿಕ್ಕ ಗೆಳತಿ...." ಎಂದರು.

ಲಿಂಕನ್ ಈಗ ಚೆನ್ನಾಗಿ ಕಾಣಿಸುತ್ತಿದ್ದಾರೆ ಎಂದು ಗ್ರೇಸ್ ಭಾವಿಸಿದಳು. ಅವಳ ಕೆನ್ನೆ ಕೆಂಪೇರಿತು. ಇದನ್ನು ಗಮನಿಸಿದ ಲಿಂಕನ್ ಪುನಃ ಹೇಳಿದರು, "ನನ್ನ ಚಿಕ್ಕ ಗೆಳತಿ..."

ಚಿಕ್ಕ ಹುಡುಗಿಯ ಪ್ರಾಮಾಣಿಕ ಅಭಿಪ್ರಾಯಕ್ಕೂ ಅಬ್ರಹಾಂ ಲಿಂಕನ್ ಬೆಲೆಕೊಟ್ಟರು. ಹಾಗೆಂದೇ ಅವರು ಮಹಾಪುರುಷರಾಗುವ ಅರ್ಹತೆ ಪಡೆದಿದ್ದರು.